**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 3788/2022**

| | | |
|---|---|---|
| ಸಾಕ್ಷಿಯ ಹೆಸರುಃ | ಶಶಿಧರ ಬಾಬು | ಪ್ರಾಸಾಃಃ 1 |
| ತಂದೆ ಹೆಸರುಃ | ಲೇಟ್ ಮುನಿಸ್ವಾಮಿ ರೆಡ್ಡಿ | ಚಾಸಾಃಃ 1 |
| ವಯಸ್ಸುಃ | 67 ವರ್ಷ | ಪ್ರಮಾಣೀಕರಿಸಿದ<br>ದಿಃ 27/12/2023 |
| ಉದ್ಯೋಗಃ | ಏನೂ ಇಲ್ಲ | |
| ವಾಸ ಸ್ಥಳಃ | ಬೆಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನನಗೆ ಆರೋಪಿತರ ಪರಿಚಯ ಇದೆ. ಅವರು ನನ್ನ ಸ್ನೇಹಿತನಾಗಬೇಕು. ಚಾಸಾ-2 ರಿಂದ 5 ರವರ ಪರಿಚಯ ಇದೆ. ದಿಃ 23/09/2019 ರಂದು ನಾನು ಮಧ್ಯಾಹ್ನ 1.00 ಗಂಟೆಗೆ ಸುರಗಳ್ಳಿಯ ಅಣ್ಣಯ್ಯರೆಡ್ಡಿಯವರ ಮನೆಯ ಹತ್ತಿರ ನನ್ನ ಟಾಟಾ ಹಿಟಾಚಿ ವಾಹನವನ್ನು ನಿಲ್ಲಿಸಿದ್ದು, ಅದನ್ನು ನೋಡಲು ಹೋಗಿದ್ದೆ. ಸದರಿ ವಾಹನವನ್ನು ನೋಡಿಕೊಳ್ಳಲು ಕಾಂತರಾಜು ರವರಿಗೆ ತಿಳಿಸಿದ್ದೆ. ನಾನು ಹೋದಾಗ ಸದರಿ ಸ್ಥಳದಲ್ಲಿ ಟಾಟಾ ಹಿಟಾಚಿ ವಾಹನ ಇರಲಿಲ್ಲ. ನಾನು ವಾಹನದ ಬಗ್ಗೆ ಅಕ್ಕಪಕ್ಕದವರನ್ನು ವಿಚಾರಿಸಿದಾಗ ಆರೋಪಿತ ಟಾಟಾ ಹಿಟಾಚಿ ವಾಹನವನ್ನು 25 ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳಿದರು. ನಂತರ ನಾನು ದಿಃ30/09/2019 ರಂದು ಠಾಣೆಗೆ ಹೋಗಿ ಪೊಲೀಸರಿಗೆ ತಿಳಿಸಿ, ದೂರನ್ನು ದಾಖಲಿಸಿದೆ. ಕೋವಿಡ್ ಸಮಯವಾದ್ದರಿಂದ ದೂರು ದಾಖಲಿಸಲು ವಿಳಂಬವಾಯಿತು. ದಿಃ30/09/2019 ರಂದು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿದರು. ನಾನು ಪೊಲೀಸರಿಗೆ ವಾಹನದ ದಾಖಲಾತಿಗಳನ್ನು ನೀಡಿರುತ್ತೇನೆ.

2. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು **ನಿ.ಪಿ.1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರ್ ನ್ನು **ನಿಪಿ.2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.2(ಎ)**ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್ಚಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**